ix. ಗ್ರಂಥಾಲಯದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿಯ ಸಂಬಳದಲ್ಲಿರುವ ವ್ಯತ್ಯಾಸವನ್ನು ಸರಿಪಡಿಸುವುದು.

ಶ್ರೀ ಮಲ್ಲಾರಿಗೌಡ, ಎಸ್. ಪಾಟೀಲ್.— ಮಾನ್ಯ ಅಧ್ಯಕ್ಷರೆ, ಕರ್ನಾಟಕದಲ್ಲಿಯ ಶಿಕ್ಷಣ ಸಂಸ್ಥೆಗಳಲ್ಲಿ ಗ್ರಂಥಾಲಯದಲ್ಲಿ ಕೆಲಸ ಮಾಡುತ್ತಿರುವ ಸಿಬ್ಬಂದಿ ವರ್ಗಕ್ಕೆ (ಗ್ರಂಥಪಾಲಕರಿಗೆ) ಕೊಡಬೇಕಾಗಿರುವ ಸಂಬಳದ ವ್ಯತ್ಯಾಸವನ್ನು ಸರಿಪಡಿಸದೇ ಇರುವುದು ವಿಷಾದನೀಯ. ಕೇಂದ್ರ ಸರ್ಕಾರದ ನಿಯಮಾವಳಿ ಪ್ರಕಾರ ಸರ್ಕಾರಿ ಗ್ರಂಥಾಲಯಗಳಲ್ಲಿ ವೇತನ ಶ್ರೇಣಿ ಕೊಡಲಾಗಿದ್ದು, ಶಿಕ್ಷಣ ಕ್ಷೇತ್ರದಲ್ಲಿರುವ ಗ್ರಂಥಾಲಯದ ಕೆಲಸಗಾರರಿಗೆ ಉಪನ್ಯಾಸಕರ ವೇತನ ಶ್ರೇಣಿಯನ್ನು ಅನುಷ್ಠಾನ ಮಾಡುವುದರಲ್ಲಿ ವಿಳಂಬಕ್ಕೆ ಕಾರಣವೇನು ? ಈ ಅನ್ಯಾಯವನ್ನು ಸರಿಪಡಿಸಿ ಗ್ರಂಥಪಾಲಕರಿಗೆ ಉಪನ್ಯಾಸಕರಿಗೆ ಕೊಡುವ ವೇತನ ಶ್ರೇಣಿಯನ್ನು ಕೊಟ್ಟು ಸರ್ಕಾರದ ಆದೇಶಕ್ಕಾಗಿ ಈ ಸೂಚನೆಯನ್ನು ಸದನದಲ್ಲಿ ಮಂಡಿಸುತ್ತೇವೆ. ವಿದ್ಯಾ ಮಂತ್ರಿಗಳು ಈ ಬಗ್ಗೆ ತೀವ್ರ ಕ್ರಮ ಕೈಕೊಂಡು ಸದನದಲ್ಲಿ ಹೇಳಿಕೆಯನ್ನು ಕೊಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೆ, ವಿದ್ಯಾ ಮಂತ್ರಿಗಳು ವಿಧಾನಪರಿಷತ್‌ನಲ್ಲಿ ಇದ್ದಾರೆ. ಅವರು ಬಂದ ನಂತರ ಉತ್ತರ ತರಿಸುತ್ತೇನೆ.

x. ರಹದಾರಿ ಪತ್ರ [Passport] ನಿಯಮಾವಳಿಗಳಲ್ಲಿ ಬದಲಾವಣೆ ಮಾಡುವ ಬಗ್ಗೆ

SRI J. A. FERNANDEZ.—Sir, I call the attention of the Home Minister to the hardships caused to the applicants who are seeking passports due to the change in the rules curtailing the rights of the M. Ps. M. L. As and M. L. Cs and authorising only Gazetted Officers to attest Passport applications as well as Photographs.

I therefore request the State Government to put forth the maximum efforts to restore the rights of the Legislators by contating the Government of India and ensuring that their earlier status may continue.

SRI A. LAKSHMISAGAR (Hon'ble Minister for Law and Parliamentay Affairs and Urban Development).— Sir, this matter pertains to the Government of India. The grievances of the Hon'ble Member will be taken up with the Government of India for appropriate action.

xi. ರಾಜ್ಯದಲ್ಲಿ ಕೃಷಿ ಭೂಮಿಯ ಪಕ್ಕದಲ್ಲಿ ಕಟ್ಟಿಕೊಂಡಿರುವ ಮನೆಗಳಿಗೆ ಪರಿವರ್ತನಾ ದಂಡವನ್ನು ವಿಧಿಸಿರುವುದು.

ಶ್ರೀ ಬಿ. ಸ್ವಾಮಿರಾವ್.— ಮಾನ್ಯ ಅಧ್ಯಕ್ಷರೇ, ಕರ್ನಾಟಕ ರಾಜ್ಯದಲ್ಲಿ ಇತ್ತೀಚೆಗೆ ಹಳ್ಳಿಗಾಡಿನ ಪ್ರದೇಶದಲ್ಲಿ ಜನ ತಮ್ಮ ತಮ್ಮ ಕೃಷಿ ಭೂಮಿಯ ಪಕ್ಕದಲ್ಲಿ ಬಹಳ ಕಾಲದ ಹಿಂದೆ ಕಟ್ಟಿಸಿಕೊಂಡ ಮನೆಗಳ ಮೇಲೆ ಮತ್ತು ಇತ್ತೀಚೆಗೆ ಕಟ್ಟಿಸಿಕೊಂಡ ಮನೆಗಳ ಮೇಲೂ ಸಹಾ ೫೦೦ ರೂ.ಗಳಿಂದ ೨೫೦೦೦ಗಳವರೆಗೆ ಪರಿವರ್ತನಾದಂಡ ವಿಧಿಸಿರುವ ಪ್ರಕರಣಗಳು ಬೆಳಕಿಗೆ ಬಂದಿದೆ. ಈ ರೀತಿ ಅಸಮಂಜಸವಾದ ಹೇರಳ ದಂಡ ವಿಧಿಸಿದ್ದನ್ನು ನೋಡಿ ಹಳ್ಳಿಗಾಡಿನ ಜನ ಕಂಗಾಲಾಗಿದ್ದಾರೆ. ಕಾರಣ ಯಾವ ಮಾನದಂಡದಿಂದ ಈ ರೀತಿ ದಂಡ ವಿಧಿಸಿದ್ದೀರಿ ಎನ್ನುವುದು ಯಾರಿಗೂ ಗೊತ್ತಾಗುತ್ತಿಲ್ಲ. ಮನೆ ಕಟ್ಟಲ್ಪಟ್ಟ ಸ್ಥಳಗಳು ವಿಶೇಷ ಬೆಲೆ ಬಾಳುವ ಜಮೀನುಗಳಲ್ಲ, ಹಾಗೂ ಯಾವುದೇ ನಾಗರಿಕ ಸೌಲಭ್ಯವನ್ನೂ ಪಡೆದವುಗಳಲ್ಲ. ಮಾರುಕಟ್ಟೆಯಲ್ಲಿ ಇಂತಹ ಜಮೀನುಗಳಿಗೆ ಹೆಚ್ಚಿನ ಬೆಲೆಯೂ ಇಲ್ಲ. ಇಂತಹ ಎಲ್ಲಾ ಪ್ರಕರಣಗಳನ್ನೂ ಮರುಪರಿಶೀಲಿಸಿ, ಕಾನೂನು ರೀತ್ಯ ಸ್ವಲ್ಪ ಪರಿವರ್ತನೆ ಶುಲ್ಕವನು ವಿಧಿಸಿ ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡುವತ್ತ ಸರ್ಕಾರದ ಗಮನ ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಸಚಿವರು).—

ಸರ್ಕಾರವು ಕರ್ನಾಟಕ ಭೂ ಕಂದಾಯ ನಿಯಮ, ೧೯೬೪ರ ಕಲಂ ೯೬ಕ್ಕೆ ತಿದ್ದುಪಡಿಯನ್ನು ಸುಗ್ರೀವಾಜ್ಞೆಯ ಮೂಲಕ ದಿನಾಂಕ ೮-೬-೧೯೮೪ರಂದು ಜಾರಿ ಗೊಳಿಸಲಾಯಿತು ಮತ್ತು ಅದು ದಿನಾಂಕ ೨೭-೪-೧೯೮೫ ರಂದು ಕಾಯ್ದೆಯಾಯಿತು. ಒಟ್ಟು ಗೂಡಿಸಿದ ಹಣವನ್ನು ಸದರಿ ತಿದ್ದುಪಡಿಯನ್ವಯ ಕರ್ನಾಟಕ ಭೂ ಕಂದಾಯ ಅಧಿನಿಯಮ ೧೯೬೪ರ ಉಪ ಕಲಂ ೪ರ ಕೆಳಗೆ ವಿಧಿಸಲಾಗಿತ್ತದೆ ಮತ್ತು ಕರ್ನಾಟಕ ಭೂ ಕಂದಾಯ ನಿಯಮಗಳು ೧೯೬೪ರ ಹೊಸ ನಿಯಮ ೧೦೭-ಎರಲ್ಲಿ ಅದನ್ನು ಈ ಕೆಳಗಿನಂತೆ ಒದಗಿಸಲಾಗಿದೆ.

ಕ್ರಮ ಸಂಖ್ಯೆ.	ಸ್ಥಳ	ಪ್ರದೇಶ	ಒಂದು ಚದುರ ಅಡಿಯ ದರ ರೂ.ಗಳಲ್ಲಿ	
			ನಿವಾಸಕ್ಕಾಗಿ	ನಿವಾಸೇತರಕ್ಕಾಗಿ
೧	೨	೩	೪	೫
೧.	ಬೆಂಗಳೂರು	ಮುನಿಸಿಪಾಲಿಟಿ ಕಾರ್ಪೋರೇಶನ್ ಮಿತಿ ಮತ್ತು ಕಾರ್ಪೋರೇಶನ್ ಮಿತಿಯ ೧೮ ಕಿ.ಮಿ ಒಳಗಿನ ಎಲ್ಲ ಜಮೀನು.	೧೧–೫೦	೫೭–೫೦
೨.	ಮೈಸೂರು ಹುಬ್ಬಳ್ಳಿ ಧಾರವಾಡ ಮಂಗಳೂರು ಮತ್ತು ಬೆಳಗಾವಿ	ಮುನಿಸಿಪಾಲಿಟಿ ಕಾರ್ಪೋರೇಶನ್ ಮಿತಿ ಮತ್ತು ಕಾರ್ಪೋರೇಶನ್ ಮಿತಿಯಂ ೮ ಕಿ. ಮೀಟರ್ ಒಳಗಿನ ಎಲ್ಲ ಜಮೀನು.	೭–೦೦	೩೪–೫೦
೩.	ಗುಲ್ಬರ್ಗ, ದಾವಣಗೆರೆ, ಶಿವಮೊಗ್ಗ, ಭದ್ರಾವತಿ ಬಳ್ಳಾರಿ ಮತ್ತು ಬಿಜಾಪುರ	ಮುನಿಸಿಪಾಲಿಟಿ ಮಿತಿ ಮತ್ತು ಮುನಿಸಿಪಾಲಿಟಿ ಮಿತಿಯ ೮ ಕಿ.ಮೀಟರ್ ಒಳಗಿನ ಎಲ್ಲ ಜಮೀನು.	೫–೭೫	೨೫–೭೫
೪.	ಇತರ ಜಿಲ್ಲಾ ಮುಖ್ಯ ಕೇಂದ್ರಗಳು ಮತ್ತು ಗದಗ, ದಾಂಡೇಲಿ, ಕೋಲಾರ ಗೋಲ್ಡ್ ಫೀಲ್ಡ್ ಹೊಸಪೇಟೆ ಮತ್ತು ಬಾಗಲಕೋಟೆ	ಮುನಿಸಿಪಾಲಿಟಿ ಮಿತಿ ಮತ್ತು ಮುನಿಸಿಪಾಲಿಟಿ ಮಿತಿಯಂ ೫ ಕಿ. ಮೀಟರ್ ಒಳಗಿನ ಎಲ್ಲ ಜಮೀನು.	೩–೦೦	೧೪–೫೦
೫.	ಇತರ ಸ್ಥಳಗಳು	—	೦–೨೫	೧–೨೦

೧ ಚದುರ ಮೀಟರ್—೧೦—೭೬ ಚದುರ ಅಡಿಗಳು.

ದೊಡ್ಡ ಪಟ್ಟಣ.— ನಗರಗಳಲ್ಲಿ ಮತ್ತು ಅದರ ಸುತ್ತು ಮುತ್ತಲಿನ ಪ್ರದೇಶಗಳಲ್ಲಿಯ ಈ ಅತಿತರ ಘಟನೆಗಳನ್ನು ಹಿಡಿಗಟ್ಟುವ ಉದ್ದೇಶದಿಂದ ಮಾತ್ರ ಸದರಿ ತಿದ್ದುಪಡಿಯನ್ನು ಮಾಡಲಾಗಿದೆ. ಆದರೆ ಈ ಕಾನೂನು ರೈತರು ತಮ್ಮ ಕೃಷಿ ಜಮೀನಿನಲ್ಲಿ ಸ್ವಂತ ಉಪಯೋಗಕ್ಕಾಗಿ ಕಟ್ಟಿದ ಮನೆಗಳಿಗೆ ಅಥವಾ ಕಟ್ಟಬೇಕೆಂದಿರುವ ಮನೆಗಳಿಗೆ ಅನ್ವಯವಾಗುವುದಿಲ್ಲ.

ಹಳ್ಳಿಗಾಡಿನಲ್ಲಿ ಕಟ್ಟಿಸಿದ ಮನೆಗಳ ಮೇಲೆ ೫೦೦ ರೂಪಾಯಿಗಳಿಂದ ೨೫,೦೦೦ ರೂಪಾಯಿಗಳ ವರೆವಿಗೆ ಒಟ್ಟು ಗೂಡಿಸಿದ ದಂಡವನ್ನು ಕಡಿಮೆ ಮಾಡಲು ಕೋರಿ ಅರ್ಜಿಗಳು ಸರ್ಕಾರಕ್ಕೆ ಬಂದಿದೆ ಮತ್ತು ಅವರುಗಳ ಕೋರಿಕೆಯು ಸರ್ಕಾರದ ಪರಿಶೀಲನೆಯಲ್ಲಿದೆ.

ಇದು ಈಗಾಗಲೇ ಬಹುತೇಕವಾಗಿ ದೊಡ್ಡ ದೊಡ್ಡ ನಗರಗಳ ಸುತ್ತಲೂ ಕೆಲವರು ಕೃಷಿ ಭೂಮಿಯನ್ನು ಸರಕಾರದ ನಿಯಮಗಳಿಗೆ ವಿರುದ್ಧವಾಗಿ ಕೃಷಿಯೇತರ ಉಪಯೋಗಕ್ಕೆ ಅವಶ್ಯಕತೆ ಇರತಕ್ಕಂತಹ ಹಣವನ್ನು ತುಂಬಿದೆ. ಪರವಾನಿಗಿ ಪಡೆದುಕೊಳ್ಳದೆ ಇಂತಹ ಕಟ್ಟಡಗಳನ್ನು ಕಟ್ಟಿದ್ದಾರೆ. ಹಿಂದೆ ಕಟ್ಟಿದಂತಹವರಿಗೆ ರೆಗ್ಯುಲರೈಸ್ ಮಾಡಬೇಕು. ಮುಂದೆ ಹಾಗೆ ಕಟ್ಟಲು ಬಿಡಬಾರದು ಎಂಬ ದೃಷ್ಟಿಯಿಂದ ದಂಡವನ್ನು ವಿಧಿಸಲಾಗಿದೆ. ಮುಂದೆ ಈ ರೀತಿಯಲ್ಲಿ ಯಾರಾದರೂ ಮಾಡಿದರೆ ದಂಡ ಮತ್ತು ಶಿಕ್ಷೆ ಎರಡನ್ನೂ ಮಾಡುವುದಕ್ಕೆ ಇದರಲ್ಲಿ ಅವಕಾಶ ಮಾಡಿದ್ದೇವೆ. ಇನ್ನು ರೈತರು ತಮ್ಮ ಜಮೀನಿನಲ್ಲಿ ಮನೆ ಕಟ್ಟುವುದರ ಬಗ್ಗೆ ದಂಡ ಕೊಡುವ ಪ್ರಶ್ನೆ ಇಲ್ಲ. ಅವರಿಗೆ ಫಾರ್ಮ್ ಹೌಸನ್ನು ಕಟ್ಟಿಕೊಳ್ಳಲಿಕ್ಕೆ ಅವಕಾಶ ಇದೆ. ಅವರಿಗೆ ದಂಡ ವಿಧಿಸಲಿಕ್ಕೆ ನಿಯಮ ಇಲ್ಲ. ಅಂತಹ ಪ್ರಕರಣಗಳು ಒಂದು ವೇಳೆ ಇದ್ದಲ್ಲಿ ಅದನ್ನು ನನ್ನ ಗಮನಕ್ಕೆ ತಂದಲ್ಲಿ ಸರಿಪಡಿಸುತ್ತೇನೆ.

XII. ಉಳ್ಳಾಲ ಕ್ಷೇತ್ರದಲ್ಲಿ ವೋಲ್ಟೇಜ್ ಕಡಿಮೆಯಾಗಿ ವಿದ್ಯುತ್ ಕೊರತೆಯಾಗಿರುವುದು

ಶ್ರೀ ಡಿ. ಎಂ. ಇದಿನಬ್ಬ.—ಉಳ್ಳಾಲ ಕ್ಷೇತ್ರದಲ್ಲಿ ವಿದ್ಯುತ್ ಕೊರತೆ ವೋಲ್ಟೇಜು ಕಡಿಮೆಯಾಗಿ ಗ್ರಾಹಕರಿಗೆ ಆಗಾಗ ತೊಂದರೆ ಉದ್ದಗಡ್ತಿರುವ ವಿಚಾರ ತಿಳಿದಿರುವುದೇ ಆಗಿದೆ. ಈ ತೊಂದರೆ ತಪ್ಪಿಸಲು ಕೊಣಾಜೆಯಲ್ಲಿ ಸ್ಟೇಷನ್ ಸ್ಟಾಫ್ ಕಡ್ಡಾಯ ಮಾಡಬೇಕು. ಸ್ಟೇಷನ್ ಸ್ಟಾಫ್ ಇಟ್ಟು, ನಾಲ್ಕು ಲೈನುಗಳ ಗಮನ ಸರಿಯಾಗಿ ಹರಿಸಿದರೆ ಉಳ್ಳಾಲ ಕ್ಷೇತ್ರದ ವಿದ್ಯುತ್ ತೊಂದರೆ ನೀಗುವಂತಾದೀತು. ಆದಕಾರಣ ಕೊಣಾಜೆ ಸ್ಟೇಶನ್‌ನಿನಲ್ಲಿ ಖಾಯಂ ಸ್ಟಾಫ್ ಇಟ್ಟು ಈ ಭಾಗದ ಜನರಿಗಿರುವ ವಿದ್ಯುತ್ ತೊಂದರೆಯನ್ನು ಸರಿಪಡಿಸುವುದು ಆಗತ್ಯವಾಗಿರುತ್ತದೆ. ಈ ಕುರಿತು ವಿದ್ಯುತ್ ಸಚಿವರ ಗಮನ ಸೆಳೆಯುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಾನ್ಯ ವಿದ್ಯುತ್ ಸಚಿವರು ಸದನದಲ್ಲಿ ಇಲ್ಲ. ಅವರಿಂದ ಮಾನ್ಯ ಸದಸ್ಯರಿಗೆ ಸೂಕ್ತವಾದ ಉತ್ತರವನ್ನು ತರಿಸಿಕೊಡಲು ಏರ್ಪಾಡು ಮಾಡುತ್ತೇನೆ.

XIII. ಶಿವಮೊಗ್ಗ ಜಿಲ್ಲೆಯಲ್ಲಿ ವಿಲೇಜ್ ಅಕೌಂಟೆಂಟ್ ಹುದ್ದೆಗೆ ಬೇಕಾದ ಅರ್ಜಿಗಳು ದೊರೆಯದಿರುವುದು

ಶ್ರೀ ಎಂ. ರಾಮಪ್ಪ (ಬಳ್ಳಾರಿ).—ಶಿವಮೊಗ್ಗ ಜಿಲ್ಲೆಯಲ್ಲಿ ವಿಲೇಜ್ ಅಕೌಂಟೆಂಟ್ ಹಾಗೂ ಅಗ್ರಿಕಲ್ಚರಲ್ ಅಸಿಸ್ಟೆಂಟ್‌ರುಗಳು ನೇಮಕಾತಿ ಬಗ್ಗೆ ಅರ್ಜಿಗಳನ್ನು ಕರೆಯಲಾಗಿದ್ದು ೨೧ನೇ ದಿನಾಂಕ ಕೊನೆಯ ದಿನವಾಗಿರುತ್ತದೆ. ಆದರೆ ಅರ್ಜಿ ಫಾರಂಗಳು ದೊರೆಯುತ್ತಿಲ್ಲ. ಕಡೆಯ ದಿನಾಂಕವನ್ನು ಮುಂದುವರಿಸಿ ಕೂಡಲೇ ಅರ್ಜಿ ಫಾರಂಗಳು ದೊರಕುವಂತೆ ಶೀಘ್ರಕ್ರಮವನ್ನು ಕೈಕೊಳ್ಳಬೇಕೆಂದು ಸರಕಾರವನ್ನು ನಾನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸದಸ್ಯರು ಗಮನಕ್ಕೆ ತಂದ ವಿಚಾರದಲ್ಲಿ ದಿನಾಂಕವನ್ನು ಮುಂದುವರಿಸುವುದಕ್ಕೆ ಪರಿಶೀಲನೆ ಮಾಡುತ್ತೇನೆ.

XIV. ಕೃಷಿ ಸಹಾಯಕ ಹುದ್ದೆಗಳಿಗೆ ಅರ್ಜಿಗಳನ್ನು ದಕ್ಷಿಣ ಕನ್ನಡ ಜಿಲ್ಲೆಗೆ ಕಳಿಸುವುದು ಮತ್ತು ಕೊನೆಯ ದಿನಾಂಕವನ್ನು ಮುಂದೂಡುವುದು

ಶ್ರೀ ವಸಂತ ವಿ. ಸಾಲ್ಯಾನ್.—ಕರ್ನಾಟಕ ಸರಕಾರವು ಕೃಷಿ ಇಲಾಖೆಗೆ ೭೦೦ ಕೃಷಿ ಸಹಾಯಕ ಹುದ್ದೆಗಳಿಗೆ ಫಾರಂ ನಂ. ೧೧ರಲ್ಲಿ ಅರ್ಜಿ ಆಹ್ವಾನಿಸಿದ್ದಾರೆ. ಆದರೆ ಈ ಅರ್ಜಿ ನಮೂನೆ ಇನ್ನೂ ಎಂದರೆ ನಿನ್ನೆವರೆಗೆ ದಕ್ಷಿಣ ಕನ್ನಡವನ್ನು ಇನ್ನೂ ತಲುಪಿಲ್ಲ. ಅರ್ಜಿ ಸಲ್ಲಿಸಲು ಕಡೇ ದಿನಾಂಕ ೨೦-೩-೧೯೮೬ ರಂದು ಆ ದಿನಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಯಾವ ಅಭ್ಯರ್ಥಿಗಳೂ ಅರ್ಜಿ ಸಲ್ಲಿಸದಂತೆ ಇದು ಪೂರ್ವ